# ಸರ್ವಶಿಕ್ಷಣ ಅಭಿಯಾನ – ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ.
ಪೂರಕ ಕಟ್ಟಡ ನೃಪತುಂಗ ರಸ್ತೆ, ಬೆಂಗಳೂರು – 560 001

ಸಂಖ್ಯೆ : ಸಶಿಅ/ಒಒಎಸ್‌ಸಿ/ಮಕ್ಕಳ ಹಕ್ಕು/2009-10

ದಿ. 23-05-2009

## ಸುತ್ತೋಲೆ

****

**ವಿಷಯ : ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ಸ್ಥಾಪಿಸುವ ಕುರಿತು.**

ಮಕ್ಕಳನ್ನೆಲ್ಲಾ ಶಾಲೆಗೆ ಸೇರಿಸಲೇಬೇಕು, ಎಲ್ಲ ಮಕ್ಕಳೂ ಶಾಲೆಯಲ್ಲಿ ಕಲಿಯಲೇಬೇಕು. ಎನ್ನುವ ಮನೋಭಾವ ಈಗ ಎಲ್ಲ ಕಡೆಯೂ ಮೂಡುತ್ತಿದೆ. ಗಂಡಿರಲಿ, ಹೆಣ್ಣಿರಲಿ ಮಕ್ಕಳು ಶಾಲೆಯ ಕಲಿಕೆಯಿಂದ ವಂಚಿತರಾಗಬಾರದು. ಸಂವಿಧಾನದ ವಿಧಿ 21 'ಎ' ರಂತೆ 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕಿದೆ.

ಮಕ್ಕಳ ಹಕ್ಕುಗಳ ಹಿನ್ನೆಲೆಯಲ್ಲಿ ಇಂದಿನ ದಿನಗಳಲ್ಲಿ ಈ ಘೋಷಣೆ ಬದಲಾಗಿದೆ – ಇಂದಿನ ಮಕ್ಕಳನ್ನು ಇಂದಿನ ಪ್ರಜೆಗಳೆಂದೇ ಕಾಣಬೇಕು. ದೇಶದ ಎಲ್ಲ ಪ್ರಜೆಗಳಿಗಿದ್ದಂತೆ ಅವರಿಗೂ ಸಂವಿಧಾನದಲ್ಲಿ ಹೇಳಿರುವ ಎಲ್ಲ ಹಕ್ಕುಗಳನ್ನು ಮಾನ್ಯ ಮಾಡಬೇಕಾದ ಕರ್ತವ್ಯ ಸರ್ಕಾರ ಮತ್ತು ಸರ್ಕಾರವನ್ನು ಪ್ರತಿನಿಧಿಸುವ ಎಲ್ಲ ಅಧಿಕಾರಿಗಳೂ ಮತ್ತು ಸಾರ್ವಜನಿಕರದ್ದು; ಈ ಮಕ್ಕಳ ಶೈಕ್ಷಣಿಕ ಹಕ್ಕುಗಳನ್ನು ಜಾರಿಮಾಡುವ ಜೊತೆ ಜೊತೆಯಲ್ಲಿಯೇ ಮಕ್ಕಳ ಇತರ ಹಕ್ಕುಗಳನ್ನು ಮಾನ್ಯ ಮಾಡುವ, ಆ ಮೂಲಕ ಶಾಲೆಗಳನ್ನು/ ಮಕ್ಕಳ ಹಕ್ಕುಗಳ ಸಂಘಗಳಿಗೆ, ಶಿಕ್ಷಕ ವೃಂದ ಮತ್ತು ಸಮುದಾಯಕ್ಕೆ ಪ್ರಮುಖವಾದ ಸ್ಥಾನವಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯನ್ನು ಸಾಧಿಸಲು ಹಾಗೂ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸರ್ವ ಶಿಕ್ಷಣ ಅಭಿಯಾನ ಹಾಗೂ ಕಾರ್ಮಿಕ ಇಲಾಖೆಯೊಂದಿಗೆ ಪರಸ್ಪರ ಸಮನ್ವಯತೆಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಜಿಲ್ಲಾ ಹಂತದಲ್ಲಿ ಸಮಿತಿಗಳನ್ನು ರಚಿಸಲು ತಿಳಿಸಿದೆ.

ಉದ್ದೇಶ : (1) ವಿದ್ಯಾರ್ಥಿಗಳಲ್ಲಿ ಮಕ್ಕಳ ಹಕ್ಕು ಕರ್ತವ್ಯಗಳ ಅರಿವು ಮೂಡಿಸುವುದು ಹಾಗೂ ಅವು ದೊರೆಯುವ ವಾತಾವರಣ ನಿರ್ಮಾಣ ಮಾಡುವುದು. (2) ಶಿಕ್ಷಕ ಮತ್ತು ಶಿಕ್ಷಕೇತರ ವರ್ಗದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮತ್ತು ಮಕ್ಕಳ ಹಕ್ಕುಗಳಿಗೆ ಬದ್ಧರಾಗಲು ಕ್ರಮ ಕೈಗೊಳ್ಳುವುದು. (3) ಎಲ್ಲಾ ಮಕ್ಕಳಿಗೂ ಅವರ ಹಕ್ಕುಗಳು ಸಂಪೂರ್ಣ ರೂಪದಲ್ಲಿ ದೊರಕುವಂತಹ ವಾತಾವರಣ ಸೃಷ್ಟಿಸುವುದು. (4) ನಾಯಕತ್ವ ಬೆಳವಣಿಗೆ. (5) ಚರ್ಚೆ ನಡೆಸಿ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ವೃದ್ಧಿಸುವುದು. (6) ಶಾಲಾಭಿವೃದ್ಧಿ ಮತ್ತು ಉಸುತ್ತುವಾರಿ ಸಮಿತಿ ಮತ್ತು ಪಂಚಾಯಿತಿಗಳಿಗೆ ಶಾಲೆ ಹಾಗೂ ವಿದ್ಯಾರ್ಥಿಗಳ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡುವ ಹಾಗೂ ಸೂಕ್ತ ಕ್ರಮಗಳಿಗೆ ಒತ್ತಾಯಿಸುವ ಕೊಂಡಿಯಾಗುವುದು.

**ಮಕ್ಕಳ ಹಕ್ಕುಗಳ ಸಂಘದ ರಚನೆ**

ನಾಲ್ಕನೇ ತರಗತಿಯಿಂದ ಪ್ರಾರಂಭಿಸಿ ಪ್ರತಿ ತರಗತಿಯಿಂದ ಇಬ್ಬರು ಪ್ರತಿನಿಧಿಗಳು (ಗಂಡು ಮತ್ತು ಹೆಣ್ಣು ವಿದ್ಯಾರ್ಥಿಗಳಿಬ್ಬರೂ ಇದ್ದಲ್ಲಿ ಒಂದು ಹುಡುಗ ಮತ್ತು ಒಂದು ಹುಡುಗಿ ಆಯ್ಕೆ ಕಡ್ಡಾಯ). ಪ್ರತಿನಿಧಿಗಳಿಗೆ ಎರಡು ವರ್ಷಗಳ ಕಾಲಾವಧಿಗೆ ಆಯ್ಕೆ ಮಾಡುವುದು. ಇದರ ಸಂಚಾಲಕರಾಗಿ ಕ್ರಿಯಾಶೀಲವಾದ ಅಧ್ಯಾಪಕರೊಬ್ಬರು ನಿರ್ವಹಿಸುತ್ತಾರೆ.

**ಸಂಘದ ಚಟುವಟಿಕೆಗಳು:**

ಆಯಾ ಶಾಲೆಯ ಪರಿಸರ, ಚರಿತ್ರೆ, ಪ್ರಗತಿ ಆಧರಿಸಿ ಸಂಘವು ವಿವಿಧ ಚಟುವಟಿಕೆಗಳನ್ನು ನಿರ್ಧರಿಸಿ ನಡೆಸಬಹುದು, ಕೆಲವು ಸೂಚಿತ ಚಟುವಟಿಕೆಗಳ ಮುಂದಿವೆ:

* ಪ್ರತಿ ವಿದ್ಯಾರ್ಥಿಗೂ ಮಕ್ಕಳ ಹಕ್ಕುಗಳ ತಿಳುವಳಿಕೆ ನೀಡಲು ಕಾರ್ಯಕ್ರಮ ಮಾಡುವುದು. * ಮಕ್ಕಳಿಗೆ ಶಾಲೆಯಲ್ಲಿ ಮತ್ತು ಹೊರಗೆ ತಮ್ಮ ಮೇಲಾಗುವ ಅನ್ಯಾಯ, ದೌರ್ಜನ್ಯ, ಹಿಂಸೆ, ಶೋಷಣೆ, ಮೋಸ, ಒಟ್ಟಿನಲ್ಲಿ ತಮ್ಮ ಹಕ್ಕುಗಳ

ಉಲ್ಲಂಘನೆಯಾದಲ್ಲಿ ಅದನ್ನು ಗುರುತಿಸಲು, ಸೂಕ್ತ ವಿಧಾನದಲ್ಲಿ ಪ್ರತಿಭಟಿಸಲು, ದೂರು ದಾಖಲು ಮಾಡಲು ಅರಿವು ಮೂಡಿಸುವುದು. * ಮಕ್ಕಳಿಗೆ ತಮ್ಮ ಮೇಲಲ್ಲದೆ ಇತರರ ಮೇಲೆ ಇಂತಹ ಹಕ್ಕುಗಳ ಉಲ್ಲಂಘನೆಯಾದಾಗ ಅದನ್ನು ಗುರುತಿಸಿ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಲು ಪೋಷಕವಾಗುವ ಚಟುವಟಿಕೆಗಳು. * ಶಾಲೆಯಲ್ಲಿ ದೂರು ಪೆಟ್ಟಿಗೆ, ಪ್ರಶ್ನೆಪೆಟ್ಟಿಗೆ ಸ್ಥಾಪಿಸಲು ಮತ್ತು ಅಲ್ಲಿ ಬರುವ ಪ್ರಶ್ನೆ, ದೂರುಗಳನ್ನು ಸೂಕ್ತ ವಿಧಾನದಲ್ಲಿ ಮುಖ್ಯೋಪಾಧ್ಯಾಯರು ಪರೀಕ್ಷಿಸಲು ಮತ್ತು ಕ್ರಮ ಕೈಗೊಳ್ಳಲು ಸಂಘವು ಸಹಕರಿಸುವುದು. * ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಶಿಕ್ಷಕಿಯರನ್ನು ಗುರ್ತಿಸಿ ಗೌರವಿಸುವುದು. * ಶಾಲೆಗೆ ಬಾರದ/ಸೇರದ/ಹಾಜರಾಗದ ಮಕ್ಕಳನ್ನು ಗುರ್ತಿಸಿ ಸೂಕ್ತ ಅಂಕಿ ಸಂಖ್ಯೆಯನ್ನು ಇಟ್ಟುಕೊಳ್ಳುವುದು ಮತ್ತು ಆ ಮಕ್ಕಳನ್ನು ಶಿಕ್ಷಣಕ್ಕೆ ಕರೆತರುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು * ಯಾವುದಾದರೂ ಕುಟುಂಬ ಶಾಲೆಗೆ ಹೋಗುತ್ತಿರುವ ಮಕ್ಕಳನ್ನೂ ಸೇರಿಸಿಕೊಂಡು ಕೆಲಸ ಹುಡುಕಿಕೊಂಡು ವಲಸೆ ಹೋಗುವ ಆ ಮೂಲಕ ಮಕ್ಕಳ ಶಿಕ್ಷಣ ತಪ್ಪಿಸುವ ಸೂಚನೆ ಕಂಡುಬಂದಲ್ಲಿ ಅದನ್ನು ಸಂಬಂಧಪಟ್ಟವರ ಗಮನಕ್ಕೆ ತಂದು ಆ ಕುರಿತು ಕ್ರಮಕೈಗೊಳ್ಳಲು ಒತ್ತಾಯಿಸುವುದು. * ಬಾಲ್ಯವಿವಾಹ/ ದೇವದಾಸಿ ಆಚರಣೆ ಬಗ್ಗೆ ಮುನ್ನೆಚ್ಚರಿಕೆ ವಹಿಸಿ ಸಂಬಂಧಿಸಿದವರ ಮನ ಒಲಿಕೆ; ಅಗತ್ಯವೆನಿಸಿದಾಗ ಆಡಳಿತ, ಶಿಕ್ಷಣ ಇಲಾಖೆಗೆ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಪಂಚಾಯಿತಿಗೆ ದೂರು ನೀಡಲು ಪ್ರೇರಣೆ ನೀಡುವ ವಾತಾವರಣ ನಿರ್ಮಾಣ. * ಮಕ್ಕಳನ್ನು ಜೀತ/ಕೆಲಸ/ದುಡಿಮೆಗೆ ತಳ್ಳಿದ ಅಥವಾ ತಳ್ಳುವ ಪ್ರಸಂಗಗಳ ಬಗ್ಗೆ ತಕ್ಷಣ ಸಂಬಂಧಿಸಿದವರಿಗೆ ಮಾಹಿತಿ ರವಾನಿಸುವುದು. * ಮಕ್ಕಳಿಗಾಗಿ ಶಾಲೆಯಲ್ಲಿರುವ ವ್ಯವಸ್ಥೆಗಳು ಗ್ರಂಥಾಲಯ, ಪ್ರಯೋಗಾಲಯ, ರೇಡಿಯೋ, ಆಟದ ಸಾಮಗ್ರಿಗಳು, ಶಾಲಾ ಕೊಠಡಿಗಳು, ಶಾಲಾ ಆವರಣ, ಶೌಚಾಲಯ, ಇತ್ಯಾದಿಗಳ ದುರುಪಯೋಗ ಅಥವಾ ಅಸಮರ್ಪಕ ನಿರ್ವಹಣೆ, ವ್ಯವಸ್ಥೆಯಲ್ಲಿ ಕೊರತೆ ಕಂಡುಬಂದಲ್ಲಿ ಅದನ್ನು ಸಂಬಂಧಿಸಿದವರ ಗಮನಕ್ಕೆ ತರುವುದು. * ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಪ್ರತಿ ವರ್ಷ ಮಕ್ಕಳ ಹಕ್ಕುಗಳ ಬಗ್ಗೆ ವಿಶ್ಲೇಷಿಸಲೆಂದೇ ನಡೆಯುವ 'ಮಕ್ಕಳ ಗ್ರಾಮ ಸಭೆ'ಯಲ್ಲಿ ಶಾಲಾ ಮಕ್ಕಳೂ ಸಹ ಭಾಗವಹಿಸಿ ತಮ್ಮ ಸಮುದಾಯದಲ್ಲಿ ಮಕ್ಕಳಿಗೆ ತೊಂದರೆ ಆಗಿರುವ ವಿಚಾರ ವ್ಯವಸ್ಥೆಗಳ ಬಗ್ಗೆ ಪಂಚಾಯಿತಿದಾರರ ಗಮನ ಸೆಳೆದು ಸೂಕ್ತ ಕ್ರಮಗಳಿಗಾಗಿ ಆಗ್ರಹಿಸುವುದು. * ಮಕ್ಕಳ ಹಕ್ಕು ಸಂಬಂಧಿತ ಮೇಳ/ಚರ್ಚೆ, ಪ್ರಬಂಧ ರಚನೆ, ಭಿತ್ತಿಪತ್ರ ರಚನೆ ಇತ್ಯಾದಿ ಸ್ಪರ್ಧೆಗಳ ಏರ್ಪಾಡು.

**ಕಾರ್ಯಕ್ರಮ ಸಂಘಟನೆ:**

* ಸಂಚಾಲಕರಾದ ಅಧ್ಯಾಪಕರು ಮಕ್ಕಳ ಆಯ್ಕೆ ಮಾಡಲು ಕ್ರಮ ಮಾಡುವುದು, ತದನಂತರ ಸದಸ್ಯರು ವಾರ್ಷಿಕ ಯೋಜನೆಯನ್ನು ತಯಾರು ಮಾಡಲು ಮಾರ್ಗದರ್ಶನ ನೀಡುವುದು. * ಶಾಲಾ ಅನುದಾನದಲ್ಲಿ ಸ್ವಲ್ಪ ಹಣ ಅಥವಾ ಎನ್.ಪಿ.ಇ.ಜಿ.ಎಲ್‌ನಲ್ಲಿ ಈ ಕಾರ್ಯತಂತ್ರ ಅಳವಡಿಸಿದ್ದರೆ, ಸಂಪುಟ ಚಟುವಟಿಕೆಗೆ ಈ ಹಣ ಬಳಸಬಹುದು. * ಮಕ್ಕಳ ಹಕ್ಕುಗಳ ಸಂಘ ವರ್ಷದ ಕೊನೆಗೆ ತಾನು ನಿರ್ವಹಿಸಿದ ಕಾರ್ಯದ ವರದಿಯೊಂದನ್ನು ಸಿದ್ಧಪಡಿಸಿ ಶಾಲಾ ಮ್ಯಾಗಝೀನಿನಲ್ಲಿ ಅಳವಡಿಸಬೇಕು. * ವಿಶೇಷವಾದ ಚಟುವಟಿಕೆಗಳು/ಸಾಧನೆಗಳನ್ನು ತಮ್ಮ ನಿಕಟ ಮೇಲಧಿಕಾರಿಗಳಿಗೆ ವರದಿ ಮಾಡುವುದು.

ಸಹಿ/-
ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಕ್ರ.ಸಂ. 87: ಎಸ್.ಎಸ್./2009-10. ದಿನಾಂಕ 17.12.2009.

ತಾಲೂಕಿನ ಎಲ್ಲಾ ಪ್ರಾಥಮಿಕ/ಪ್ರೌಢಶಾಲಾ ಮುಖ್ಯ ಗುರು/CRP BRC ಸಮನ್ವಯಾಧಿಕಾರಿಗಳು ಮೇಲಿನ ಸುತ್ತೋಲೆ ಸಂ: ರಾ.ಯೋ.ನಿ/ ಸ.ಶಿ.ಅ.ಪಿ/ ಮಕ್ಕಳ ಹಕ್ಕು/2009-10 ದಿನಾಂಕ 23.5.2009 ರಂತೆ ಕ್ರಮಕೈಗೊಂಡು ವರದಿ ಸಲ್ಲಿಸಲು ಸೂಚಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ತಾ|| ಜಿ|| ರಾಯಚೂರು.